**<u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.</u>**

**ಸಿ.ಸಿ. ಸಂಖ್ಯೆ: 740/2024**

**ಸಾಕ್ಷಿಯನ್ನು ದಿಃ 28.04.2026 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

**<u>ಅರ್ಜಿಯ ಮೇಲಿನ ಆದೇಶದಂತೆ ಮುಂದುವರಿದ ಪಾಟೀ ಸವಾಲುಃ</u> ಆರೋಪಿತರ ಪರ ಶ್ರೀ.JSA ವಕೀಲರಿಂದಃ**

ಚಾಸಾ-1 ನನಗೆ ದಾಯಾದಿಯಾಗಬೇಕು. ಚಾಸಾ-1 ರವರು ನನ್ನ ದಾಯಾದಿಯಾದ ಕಾರಣ ಅವರಿಗೆ ಸಹಾಯ ಮಾಡಲೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲೀಸ್ ಠಾಣೆಯಲ್ಲಿ ಬರೆದುಕೊಂಡಿದ್ದ ಹೇಳಿಕೆಗೆ ನಾನು ಸಹಿ ಹಾಕಿದ್ದೇನೆ ಎಂದರೆ ಸರಿ. ಚಾಸಾ-1 ಮತ್ತು 1ನೇ ಆರೋಪಿ ಪ್ರೀತಿಸಿ ಮದುವೆಯಾಗಿದ್ದರು. ಸದರಿ ಮದುವೆ ಚಾಸಾ-1 ರವರ ತಂದೆ ತಾಯಿಗೆ ಇಷ್ಟ ಇರಲಿಲ್ಲ ಎಂದರೆ ಸರಿ. ನನ್ನ ಹೇಳಿಕೆಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಪಂಚಾಯ್ತಿ ಮಾಡಿದ ಬಗ್ಗೆ ಬರೆದಿದ್ದಾರೆ. ಮದುವೆಗೆ ಚಾಸಾ-1 ರವರ ತಂದೆ ತಾಯಿ ಹಾಜರಾಗಿರಲಿಲ್ಲ ಎಂದರೆ ಸರಿ. ಮದುವೆ ದೇವಸ್ಥಾನದಲ್ಲಿ ನಡೆದಿತ್ತು. ಚಾಸಾ-1 ಮತ್ತು 1ನೇ ಆರೋಪಿಗೆ ಮೊದಲನೇಯದು ಹೆಣ್ಣು ಮಗು. 2ನೇಯದ್ದು ಗಂಡು ಮಗು. ಮಕ್ಕಳನ್ನು 1ನೇ ಆರೋಪಿಯೇ ಓದಿಸುತ್ತಿದ್ದಾರೆ ಎಂದರೆ ಗೊತ್ತಿಲ್ಲ. ತಾಯಿಯ ಮನೆಯಿಂದಲೇ ಮಕ್ಕಳು ಶಾಲೆಗೆ ಹೋಗುತ್ತವೆ. ಮದುವೆಯಾದ ನಂತರ ಚಾಸಾ-1 ಮತ್ತು 1ನೇ ಆರೋಪಿ 5-6 ವರ್ಷ ಚೆನ್ನಾಗಿದ್ದರು. ಅಲ್ಲಿಯವರೆಗೆ ವಿದ್ಯಾಭ್ಯಾಸದ ಖರ್ಚನ್ನು 1ನೇ ಆರೋಪಿಯೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ಚಾಸಾ-1 ಮತ್ತು 1ನೇ ಆರೋಪಿ ಪ್ರೀತಿಸಿ ಮದುವೆಯಾಗಿರುವುದು ಚಾಸಾ-1 ರವರ ತಂದೆ ತಾಯಿಗೆ ಇಷ್ಟ ಇರಲಿಲ್ಲ ಎಂದರೆ ಸರಿ.

ಮೊದಲಬಾರಿಗೆ ಜನವರಿ 26 ಸಂಜೆ 7.30 ರ ನಂತರ ಗಲಾಟೆಯಾಯಿತು. ಆ ಸಮಯದಲ್ಲಿ ನಾನು ಅಲ್ಲಿ ಹಾಜರಿದ್ದೆ ಮತ್ತು ಗಲಾಟೆಯನ್ನು ಬಿಡಿಸಿದ್ದೇನೆ. ಗಲಾಟೆಯಾದಾಗಾ ಅಕ್ಕ-ಪಕ್ಕದ ಮನೆಯವರು ಇರಲಿಲ್ಲ. ಅಲ್ಲಿ ಯಾವುದೇ ಗಲಾಟೆ

ನಡೆದಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರು ನನ್ನ ದಾಯಾದಿಯಾದ ಕಾರಣ ಸಹಾಯ ಮಾಡಲೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.